ಶ್ರೀ ಪಿ. ಎಸ್. ರಾಣೆ.—ಒಂದು ಸಂಗತಿಯನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ. ನಮ್ಮ ರಾಜ್ಯದಲ್ಲಿ ಕಳೆದ ವರ್ಷದವರೆಗೆ ೫೩೧ ಗ್ರಾಮೀಣ ಗ್ರಂಥಾಲಯಗಳು ಮಾತ್ರ ಇತ್ತು. ಕಳೆದ ೧ ವರ್ಷದಲ್ಲಿ ೩೦೦ ಗ್ರಂಥಾಲಯಗಳನ್ನು ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರು ಸಾಕ್ಷರತೆಯ ಪ್ರಮಾಣವನ್ನು ಅನುಸರಿಸಿ ಎಲ್ಲಿ ಹೆಚ್ಚು ಇದೆ ಅಲ್ಲಿ ಗ್ರಂಥಾಲಯಗಳನ್ನು ಹೆಚ್ಚು ಕೊಡಬೇಕೆಂಬ ಸೂಚನೆಯನ್ನು ಕೊಟ್ಟಿದ್ದಾರೆ. ಅದನ್ನು ನಾನು ತಾತ್ವಿಕವಾಗಿ ಒಪ್ಪುತ್ತೇನೆ. ಆದರೆ ಇದೇ ಕಾಲಕ್ಕೆ ಗ್ರಂಥಾಲಯಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ನಾವು ಇಲ್ಲಿ ಈ ಗ್ರಾಮೀಣ ಭಾಗದಲ್ಲಿ ವಿಶೇಷವಾಗಿ ಮಾಡುತ್ತಿರುವಾಗ ಯಾವ ಗ್ರಾಮಗಳಲ್ಲಿ ಸ್ಥಳೀಯ ಸಂಸ್ಥೆಗಳು ಕಟ್ಟಡಗಳನ್ನು ಪೂರೈಸಲಿಕ್ಕೆ ಮುಂದೆ ಬರುತ್ತವೋ ಅಂತಹವರಿಗೆ ಪ್ರಾಸಶ್ತ್ಯವನ್ನು ಕೊಡುತ್ತಿದ್ದೇವೆ. ಈ ಗ್ರಂಥಾಲಯಗಳನ್ನು ಪ್ರಾರಂಭ ಮಾಡುವಾಗ ನಾವು ಈ ಗ್ರಂಥಾಲಯಗಳಿಗೆ ಕಟ್ಟಡವನ್ನು ಒದಗಿಸಿ ಕೊಡುವಂತಹ ಯೋಜನೆ ನಮ್ಮಲ್ಲಿ ಇಲ್ಲ. ನಾವು ಅಲ್ಲಿಗೆ ಪುಸ್ತಕಗಳನ್ನು ಒದಗಿಸುವುದು ಗ್ರಂಥಗಳನ್ನು ಒದಗಿಸುವುದು, ವರ್ತಮಾನ ಪತ್ರಿಕೆಗಳನ್ನು ಒದಗಿಸುವುದು ಮತ್ತು ಅವುಗಳನ್ನು ನೋಡಲಿಕ್ಕೆ ಮೇಲ್ವಿಚಾರಕರನ್ನು ನೇಮಿಸುವಂಥಾದ್ದು ಇದೆ. ಇಂತಹ ಸಂದರ್ಭ ಇರುವಾಗ ಎಲ್ಲಿ ಕಟ್ಟಡ ಗಳನ್ನು ಒದಗಿಸಲಿಕ್ಕೆ ಮುಂದೆ ಬಂದಿದ್ದಾರೋ ಆ ರೀತಿ ನಾವು ಕೊಟ್ಟಿದ್ದೇವೆ. ಇನ್ನೊಬ್ಬ ಶಾಸಕರು ನಾವು ಕಟ್ಟಡ ಕೊಡುತ್ತೇವೆಂದು ಹೇಳಿದ್ದಾರೆ. ನಾನು ನಾಳೆಯೇ ಪ್ರಾರಂಭ ಮಾಡೋಣವೆಂದು ಹೇಳಿದ್ದೇನೆ. ಮಾನ್ಯ ಸೋಮಪ್ಪ ಸುವರ್ಣ ಅವರೂ ಕೂಡ ತಮ್ಮ ಕ್ಷೇತ್ರದಲ್ಲಿ ಎಲ್ಲೆಲ್ಲಿ ಕಟ್ಟಡಗಳನ್ನು ಒದಗಿಸಲಿಕ್ಕೆ ಸಾಧ್ಯವಿದೆ ಎಂಬ ಬಗ್ಗೆ ಪಟ್ಟಿ ಕೊಟ್ಟರೆ ಅದನ್ನು ಈ ವರ್ಷದಲ್ಲಿ ಅಂದರೆ ೯೪–೯೫ ರಲ್ಲಿ ಅಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಬಯಸುತ್ತೇನೆ.

ರಾಜ್ಯದಲ್ಲಿ ಕಾಲರಾ ರ್‍ಯಾಬೀಸ್ ತಡೆಗಟ್ಟುವ ಕ್ರಮಗಳು

೨೯೩ (೮೩೬) ಶ್ರೀ ಡಿ.ಕೆ. ಎಂ. ಪುಟ್ಟಿನ್ ಷಾ (ನಾಮ ನಿರ್ದೇಶನ ಹೊಂದಿದವರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಬೇಸಿಗೆ ಕಾಲದಲ್ಲಿ ಕಾಲರಾ ಮತ್ತು ಹುಚ್ಚು ನಾಯಿ (ರ್‍ಯಾಬೀಸ್) ಪ್ರಕರಣಗಳ ಸಂಖ್ಯೆಯು ವರದಿಯಾಗಿ ಚಿಕಿತ್ಸೆ ನೀಡಲಾಗಿದೆ? (ಇದರ ವಿಚಾರವನ್ನು ನಗರ ಮತ್ತು ಗ್ರಾಮಾಂತರ ಪ್ರದೇಶ ಬೇರೆ ಬೇರೆ ಕೊಡುವುದು)

ಹ : ಹರಡಿದ್ದು

ಮ : ಮರಣ

ಆ) ಸರ್ಕಾರ ಬೇಸಿಗೆ ಕಾಲದಲ್ಲಿ ನಿಯಂತ್ರಣ ಕ್ರಮ ತೆಗೆದುಕೊಂಡ ಬಗ್ಗೆ?

ಇ) ಇದಕ್ಕಾಗಿ ಒದಗಿಸಿದ ಹಣ? (ನಗರ ಮತ್ತು ಗ್ರಾಮಾಂತರ, ಪ್ರದೇಶವಾರು ಮತ್ತು ವಾರ್ಷಿಕವಾರು)

ಶ್ರೀ ಬಿ. ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಎ) ಕಳೆದ ಮೂರು ವರ್ಷಗಳ ಬೇಸಿಗೆ ಕಾಲದಲ್ಲಿ ವರದಿಯಾದ ಕಾಲರಾ ಮತ್ತು ರ್‍ಯಾಬೀಸ್ ಪ್ರಕರಣಗಳ ವಿವರ ಹೀಗಿದೆ :

ವರ್ಷ	ವರದಿಯಾದ ಕಾಲರಾ ಪ್ರಕರಣಗಳು			
	ನಗರ		ಗ್ರಾಮಾಂತರ	
	ಹ.	ಮ.	ಹ.	ಮ.
೧೯೯೧	೭೭	೨	೨೩೮	೩
೧೯೯೨	೨೫	೨	೨೦೨	೬
೧೯೯೩	೨೧	೨	೧೮೭	೫

ವರ್ಷ	ವರದಿಯಾದ ರ್ಯಾಬೀಸ್ ಪ್ರಕರಣಗಳು			
	ನಗರ		ಗ್ರಾಮಾಂತರ	
	ಹ.	ಮ.	ಹ.	ಮ.
೧೯೯೦	೪	೪	೧೧	೧೧
೧೯೯೨	೨	೨	೧೦	೧೦
೧೯೯೩	೩	೩	೯	೯

(ಮಾರ್ಚ್, ಏಪ್ರಿಲ್, ಮೇ, ಮತ್ತು ಜೂನ್ ತಿಂಗಳುಗಳನ್ನು ಬೇಸಿಗೆಯ ಸಮಯ ಎಂದು ಪರಿಗಣಿಸಲಾಗುತ್ತದೆ).

೧) ಬೇಸಿಗೆ ಕಾಲದಲ್ಲಿ ಹರಡುವ ಕಾಲರಾ ರೋಗವನ್ನ ತಡೆಗಟ್ಟಲು ಸರ್ಕಾರವು ಮುಂಜಾಗ್ರತಾ ಕ್ರಮವಾಗಿ ರಾಜ್ಯದ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಮೂಲಗಳಿಗೆ ಬ್ಲೀಚಿಂಗ್ ಪೌಡರ್ (ಬ್ಲೀಚಿಂಗ್ ಪೌಡರ್) ಯನ್ನು ನೀರಿನಲ್ಲಿ ಮಿಶ್ರಣ ಮಾಡಿ ಜನತೆಗೆ ಶುದ್ಧ ನೀರನ್ನು ಒದಗಿಸುವ ಕ್ರಮ ಕೈಗೊಂಡಿದೆ.

೨) ಸೋಂಕಿನಿಂದ ಉಂಟಾಗಬಹುವಾದ ನಿರ್ಜಲತೆಯನ್ನು ತಡೆಯಲು ರೋಗಿಗಳಿಗೆ ಪುನರ್ಜಲೀಕರಣಕ್ಕಾಗಿ ಓಆರ್‌ಎಸ್ ಪೊಟ್ಟಣಗಳನ್ನು ವಿತರಣೆ ಮಾಡಲಾಗುತ್ತಿದೆ.

೩) ಬಿಸಿಯಾದ ಆಹಾರ ಪದಾರ್ಥಗಳನ್ನು ಸೇವಿಸುವುದು, ಬಿಸಿ ನೀರನ್ನು ಕುಡಿಯುವುದು, ಬೀದಿಯಲ್ಲಿ ಕೊಯ್ದು ಮಾರುವ ಹಣ್ಣು, ಕಾಯಿಪಲ್ಯೆಗಳನ್ನು ಮತ್ತು ತೆರೆದು ಮಾರುವ ಆಹಾರ ಪದಾರ್ಥಗಳನ್ನು ಸೇವಿಸಬಾರದು ಎಂಬ ಅಂಶಗಳನ್ನು ಕರಪತ್ರಗಳು ಮಾಡಿಹಂಚುವ ಮೂಲಕ ಹಾಗೂ ರೇಡಿಯೋ ಮತ್ತು ದೂರದರ್ಶನಗಳ ಮೂಲಕ ತಿಳುವಳಿಕೆ ನೀಡುವ ಮೂಲಕ ಜನರಿಗೆ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

೪ ರ್ಯಾಬೀಸ್ ರೋಗವು ವರ್ಷದಲ್ಲಿ ಸದಾ ಕಾಲವೂ ಉಂಟಾಗುವಂತಹದು, ಈ ರೋಗವು ಹುಚ್ಚು ನಾಯಿ ಕಡಿತದಿಂದ ಉಂಟಾಗುತ್ತದೆ, (ಆ್ಯಂಟಿ ರ್ಯಾಬೀಸ್ ಲಸಿಕೆಯನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ಲಭ್ಯವಿರುವ ವ್ಯವಸ್ಥೆ ಮಾಡಲಾಗಿದೆ).

೫) ನಾಯಿ ಕಡಿತಕ್ಕೆ ಒಳಗಾದವರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಆ್ಯಂಟಿ ರ್ಯಾಬೀಸ್ ಲಸಿಕೆಯನ್ನು ಉಚಿತವಾಗಿ ಕೊಡಲಾಗುತ್ತದೆ.

೬) ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವ ಸಲುವಾಗಿ ಪ್ರತಿ ವರ್ಷ ೧೦ ಲಕ್ಷ ರೂ.ಗಳ ಅನುದಾನವನ್ನು ನಿಗಧಿಪಡಿಸಲಾಗುತ್ತದೆ. ಈ ಅನುದಾನದಿಂದ ರೋಗಿಗಳ ಚಿಕಿತ್ಸೆಗಾಗಿ ಜೀವರಕ್ಷಕ ಔಷಧಿಗಳನ್ನು ಸರ್ಕಾರಿ ಔಷಧಿ ಮಳಿಗೆ ಮೂಲಕ ಖರೀದಿಸಿ ಎಲ್ಲಾ ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗುತ್ತದೆ ಸದರಿ ಸರಬರಾಜಿನಲ್ಲಿ ನಗರ ಅತವಾ ಗ್ರಾಮಾಂತರ ಪ್ರದೇಶವೆಂಬ ತಾರತಮ್ಯವಿಲ್ಲದೆ ವ್ಯವಸ್ಥೆ ಮಾಡಲಾಗಿದೆ. ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಪ್ರತ್ಯೇಕ ಅನುದಾನ ವ್ಯವಸ್ಥೆ ಇರುವುದಿಲ್ಲ. ಪಟ್ಟಣಗಳಲ್ಲಿ ನಗರ ಪಾಲಿಕೆಗಳು ನಗರ ಸಭೆಗಳು ತಮ್ಮದೇ ಆದ ಅನುದಾನಗಳನ್ನು ಒದಗಿಸಿಕೊಳ್ಳುತ್ತವೆ.

SRI DERRIK M. FULLINFAW.—I have received the answer in kannada and it is very difficult for me to follow kannada. I am trying my best but it will be very unreasonable and unjust for me to immediately try to follow this language. I have asked for...

ಶ್ರೀ ವಾಟಾಳ್ ನಾಗರಾಜ್.—ತಾವು ಕನ್ನಡ ಕಲಿಯಬೇಕು ಇಲ್ಲದಿದ್ದರೆ ಈ ರಾಜ್ಯ ಬಿಟ್ಟು ಹೋಗಬೇಕು. ಇಲ್ಲಿ ತಂತ್ರಗಾರಿಕೆಯಿಂದ ಮಾತನಾಡುವುದು ಸರಿಯಲ್ಲ. ಇಲ್ಲಿ ಇದ್ದ ಮೇಲೆ ಕನ್ನಡವನ್ನು ಪ್ರಾಮಾಣಿಕವಾಗಿ ಕಲಿತು ಮಾತನಾಡಬೇಕು. ಅವರಿಗೆ ಅನ್ಯಾಯವಾಗಿದೆ ಎಂದು ಹೇಳತ್ತಾರೆ ನ್ಯಾಯ ಒದಗಿಸಬೇಕಂತೆ ಅದನ್ನು ನಾನು ಒಪ್ಪುವುದಿಲ್ಲ. ಇಲ್ಲಿರತಕ್ಕಂತಹವರು ಸ್ಪಷ್ಟವಾಗಿ ಕನ್ನಡ ಕಲಿಯಬೇಕು. ಈ ರಾಜ್ಯಕ್ಕೆ ಮಾಡತಕ್ಕಂತಹ ಉಪಕಾರವೇನೂ ಅಲ್ಲ. ನಮ್ಮ ಸ್ನೇಹಿತರು ಈ ರೀತಿ ವಾದ ಮಾಡಿದರೆ ನನಗೆ ನಿಜವಾಗಲೂ ಅತ್ಯಂತ ನೋವಾಗುತ್ತದೆ. ಅವರು ಮೊದಲು ಕನ್ನಡವನ್ನು ಕಲಿತುಕೊಳ್ಳಲಿ.

ಶ್ರೀ ಪಿ.ಎಂ.

SRI QUMARUL ISLAM.—I fully support the Hon'ble Member because under the Constiution and under the procedure, he is representing the Constituency. We are not just sitting here. When we representing, when we don't know what is the answer, how can we ask clarifications ? I have also given a letter to you, Sir, that English version must be provided to me. At the same time, ನಮ್ಮ ಆಣ್ಣಸವರಿಗೆ ಹೇಳುತ್ತಿದ್ದೇನೆ. ನಾನು ಕನ್ನಡ ಕಲಿಯುತ್ತಿದ್ದೇನೆ. ನಾನು ಕನ್ನಡದಲ್ಲಿ ಭಾಷಣ ಮಾಡುತ್ತಿದ್ದೇನೆ. ಅದು ಪ್ರಶ್ನೆ ಬೇರೆ. ಇದು ಪ್ರಶ್ನೆ ಬೇರೆ. But we should get the English version also along with the Kannada copies.

SRI DERRIK F.B. FULLIN FAW.—I fully agree with our Hon'ble Member and it is totally unfair if this is going to be the attitude. It will be impossible for us to function as representatives of the people. There is no point in sitting here if we are not going to be given proper answers in the langauge we know.

ಶ್ರೀ ವಾಟಾಳ್ ನಾಗರಾಜ್.—ನಾನು ಆ ವಾದವನ್ನು ಸಮರ್ಥನೆ ಮಾಡುವುದಿಲ್ಲ. ನನಗೆ ಆ ವಾದದ ಬಗ್ಗೆ ತೃಪ್ತಿ ಇಲ್ಲ. ಸಂಪೂರ್ಣವಾಗಿ ಅವರು ಇಲ್ಲಿ ಕನ್ನಡ ಕಲಿಯಬೇಕು. ಸುಮ್ಮನೇ ಈ ತರಹ ವಾದ ಮಾಡಿಕೊಂಡು ಬೆಕ್ಕಿಗೆ ಜ್ವರ ಬರಂತ ರೀತಿಯಲ್ಲಿ ಮಾತನಾಡಿದರೆ ಇದು ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು:—ತಾವು ಉಪ ಪ್ರಶ್ನೆ ಕೇಳುತ್ತೀರಾ ?

SRI DERRIK F.B. FULLINFAW.—Sir, I hope next time our rights would be protected. I only wanted to say that every year during this time these diseases like cholera and rabies spread and lot of life is lost, particularly younger children's life is lost and as you know, prevention is better than cure, I am sure that the preventive measures mentioned in the answer to my question are good but my request to the Hon'ble Minister is to see that these preventive measures are implemented property, timely and effectively to have the desired effects. Another suggestion to the Hon'ble Minister is that the people could be educated on the prevendive measures and the precaution against these diseases through the media of television, radio etc. Would the Hon'ble Minister consider my suggestion ?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಈಗಾಗಲೇ ನಾವು ಎಲ್ಲಾ ರೀತಿಯ ಪ್ರಚಾರ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ನಾವು ಶಿಕ್ಷಣ ಕೊಡುವುದರ ಮುಖಾಂತರ ಮತ್ತು ರೇಡಿಯೋ ಮುಖಾಂತರ,

ವೀಡಿಯೋ ಮುಖಾಂತರ ಈ ರೋಗ ಹಬ್ಬುವ ರೀತಿಯಲ್ಲಿ ಯಾವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎನ್ನುವುದರ ಬಗ್ಗೆ ಕಾರ್ಯಕ್ರಮ ಸರ್ಕಾರ ಪಾಕಿಕೊಂಡಿದೆ. ಅದು ಕೇವಲ ಸೀಸನ್‌ನಲ್ಲಿ ಆಷ್ಟೇ ಮಾತ್ರ ನಾಯಿ ರೋಗ ಬರುವುದಿಲ್ಲ. ನಾಯಿ ಕಡಿತ ರೋಗ ಬೇಕಾದಾಗ ಬರಬಹುದು, ನಾಯಿ ಯಾವಾಗ ಬೇಕಾದರೂ ಕಡಿಯಬಹುದು. ಆದರೆ ಕಾಲರಾ ರೋಗ ಪರ್ಟಿಕ್ಯುಲರ್ ಸೀಸನ್‌ನಲ್ಲಿ ಬರುತ್ತದೆ. ನಾಯಿ ಕಡಿಯುವಂತಹದು, ಹುಚ್ಚು ನಾಯಿ ೧೨ ತಿಂಗಳೂ ಬೇಕಾದ ಸಮಯದಲ್ಲಿ ಕಡಿಯಬಹುದು. ನಾಯಿ ಕಡಿಯುವ ರೋಗದ ಬಗ್ಗೆ ಬೇಕಾದ ಲಸಿಕೆಗಳನ್ನು ನಾವು ಈಗಾಗಲೇ ವ್ಯವಸ್ಥೆ ಮಾಡಿದ್ದೇವೆ. ಈ ಕಾಲರಾ ರೋಗಕ್ಕೆ ಬೇಕಾಗುವಂತಹ ಪ್ರತಿಬಂಧಕಗಳನ್ನು ಸರ್ಕಾರ ವ್ಯವಸ್ಥೆ ಮಾಡಿದೆ.

SRI DERRIK F.B. FULLINFAW.—I am sure, these preventive measures are good. What I am requesting is, it should be implemented effectively.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು.—ಆ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ದಿನಾಂಕ ೩೦-೦೩-೧೯೯೪ ರಂದು ಲಿಖಿತ ಮೂಲಕ ಉತ್ತರಿಸುವ ೧೬ನೇ ಪಟ್ಟಿಯಲ್ಲಿರುವ ೪೧ ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ : ೪೪೬, ೬೫೪, ೪೪೯, ೪೫೦, ೭೧೨, ೭೪೧, ೪೪೪, ೪೪೯, ೬೫೦, ೪೪೭, ೬೫೬, ೬೫೭, ೬೫೮ ಮತ್ತು ೪೬೫ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ ೨೮ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೋಧಕರ ಹುದ್ದೆಗಳ ಭರ್ತಿ

೪೫೮(೭೭೮ಎ) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ).—ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಉನ್ನತ ಶಿಕ್ಷಣದ ಬೋಧಕರ ಹುದ್ದೆಗಳು ಖಾಲಿ ಇವೆ,

ಆ) ಆಪುಗಳನ್ನು ಇನ್ನು ಎಷ್ಟು ದಿವಸಗಳಲ್ಲಿ ಭರ್ತಿ ಮಾಡಲಾಗುವುದು ?

ಶ್ರೀ ಎಸ್. ಎಂ. ಯಾಹ್ಯ (ಉನ್ನತ ಶಿಕ್ಷಣ ಸಚಿವರು).—

ಅ) ಕಾಲೇಜು ಶಿಕ್ಷಣ ಇಲಾಖೆಯಲ್ಲಿ ೭೪೬ ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ. ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ೭ ಉಪನ್ಯಾಸಕರ ಹುದ್ದೆ ಖಾಲಿ ಇದೆ?

ಆ) ಶೀಘ್ರದಲ್ಲೇ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಚನ್ನಪಟ್ಟಣ ಸರ್ಕಾರಿ ಯುನಾನಿ ಆಸ್ಪತ್ರೆಯ ಔಷಧಿ, ಪೀಠೋಪಕರಣಗಳು ಸಾಧನ ಸಾಮಗ್ರಿಗಳಿಗೆ ಹಣ ಬಿಡುಗಡೆ

೪೬೦(೮೨೪) ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ).—ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಇತ್ತೀಚೆಗೆ ಚನ್ನಪಟ್ಟಣದಲ್ಲಿ ಒಂದು ಸರ್ಕಾರಿ ಯುನಾನಿ ಆಸ್ಪತ್ರೆ ಪ್ರಾರಂಭವಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಮೇಲ್ಕಂಡ ಆಸ್ಪತ್ರೆಗೆ ಬೇಕಾದ ಔಷಧಿ, ಪೀಠೋಪಕರಣಗಳು ಸಾಧನ ಸಾಮಗ್ರಿಗಳನ್ನು ಖರೀದಿಸಲು ಆಯವ್ಯಯ ಬಿಡುಗಡೆ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮ ?

ಇ) ಮೇಲ್ಕಂಡ ಆಸ್ಪತ್ರೆಗೆ ಈಗಿರುವ ಕಟ್ಟಡ ಸಾಕಾಗುವುದಿಲ್ಲವೆಂಬ ವಿಷಯವು ನಿಜವೇ ?

ಈ) ಹಾಗಿದ್ದಲ್ಲಿ ಈ ಯುನಾನಿ ಆಸ್ಪತ್ರೆಗೆ ಹೆಚ್ಚುವರಿ ಕಟ್ಟಡ ಕಟ್ಟಿಸಲು ಸರ್ಕಾರವು ತೆಗೆದುಕೊಂಡ ಕ್ರಮವೇನು ?